| | |
|---|---|
| Test Paper : **II** | Test Booklet Serial No. : ____________ |
| Test Subject : **SOCIAL WORK** | OMR Sheet No. : ____________ |
| Test Subject Code : **K-1616** | Roll No. ☐☐☐☐☐☐☐☐ (Figures as per admission card) |

**Name & Signature of Invigilator/s**

Signature : ____________________

Name : ____________________

**Paper : II**

**Subject : SOCIAL WORK**

Time : 1 Hour 15 Minutes | Maximum Marks : 100

Number of Pages in this Booklet : **16** | Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ .**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು .
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಸಮಾಜಕಾರ್ಯ

## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ವೃತ್ತಿಪರ ಸಮಾಜಕಾರ್ಯದ ಜಾಗತಿಕ ವ್ಯಾಖ್ಯೆಯು ''ಸಮಾಜಕಾರ್ಯವು__________ ವೃತ್ತಿ'' ಎನ್ನುತ್ತದೆ.
(A) ನ್ಯಾಯ ಆಧಾರಿತ
(B) ಸೇವೆ ಆಧಾರಿತ
(C) ಆಚರಣೆ ಆಧಾರಿತ
(D) ಮೌಲ್ಯ ಆಧಾರಿತ

**2.** ಇಂಗ್ಲೆಂಡಿನ 1601ರ ಬಡವರ ಕಾಯಿದೆಯನ್ನು __________ ಎಂದು ಗುರುತಿಸಲಾಗುತ್ತದೆ.
(A) ಎಲಿಜಬೆಥನ್ ಬಡವರ ಕಾಯ್ದೆ
(B) ವಿಕ್ಟೋರಿಯನ್ ಬಡವರ ಕಾಯ್ದೆ
(C) ಬೆವರೆಡ್ಜ್ ಬಡವರ ಕಾಯ್ದೆ
(D) ಬಡವರ ಕಾಯ್ದೆ ಆಯೋಗ

**3.** ಪಟ್ಟಿ– 1 ರೊಂದಿಗೆ ಪಟ್ಟಿ–2ನ್ನು ಹೊಂದಿಸಿರಿ ಮತ್ತು ಕೆಳಕಾಣಿಸಿದ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ :

| **ಪಟ್ಟಿ - 1** | **ಪಟ್ಟಿ - 2** |
|---|---|
| I. ಜಿ. ಕೆ. ಗೋಖಲೆ | 1. ಆರ್ಯ ಸಮಾಜ |
| II. ಸ್ವಾಮಿ ವಿವೇಕಾನಂದ | 2. ಬ್ರಹ್ಮ ಸಮಾಜ |
| III. ದಯಾನಂದ ಸರಸ್ವತಿ | 3. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ |
| IV. ರಾಜಾರಾಮ್ ಮೋಹನ್‌ರಾಯ್ | 4. ರಾಮಕೃಷ್ಣ ಮಿಷನ್ |

**ಸಂಕೇತಗಳು :**

| | I | II | III | IV |
|---|---|---|---|---|
| (A) | 3 | 2 | 1 | 4 |
| (B) | 3 | 4 | 1 | 2 |
| (C) | 2 | 3 | 4 | 1 |
| (D) | 4 | 2 | 3 | 1 |

**4.** ಭಾರತದಲ್ಲಿ ಸಮಾಜಕಾರ್ಯ ಶಿಕ್ಷಣದ ಮೊದಲ ಕ್ರಮಯುಕ್ತವಾದ ಪರಿಶೀಲನಾ ಸಮಿತಿಯ ಅಧ್ಯಕ್ಷರಾರು ?
(A) ಎಂ. ಎಸ್. ಗೋರೆ
(B) ವಿ. ಜಗನ್ನಾಥನ್
(C) ಎ. ಆರ್. ವಾಡಿಯ
(D) ರಾಧಾಕಮಲ್ ಮುಖರ್ಜಿ

**5.** ಈ ಕೆಳಕಾಣಿಸಿದ ಸಮಾಜಕಾರ್ಯ ವಿಧಾನಗಳಿಗೆ ಸಂಬಂಧಿಸಿದ ಲೇಖಕರ ಹೆಸರುಗಳಾವುವು ?

| **ಪಟ್ಟಿ - 1** | **ಪಟ್ಟಿ - 2** |
|---|---|
| I. ವ್ಯಕ್ತಿಗತ ಸಮಾಜಕಾರ್ಯ | 1. ಮರ್ರೆ.ಜಿ. ರಾಸ್ |
| II. ವೃಂದಗತ ಸಮಾಜಕಾರ್ಯ | 2. ಡಿ.ಪೌಲ್ ಚೌಧರಿ |
| III. ಸಮುದಾಯ ಸಂಘಟನೆ | 3. ಹೆಚ್.ಹೆಚ್. ಪರ್ಲ್‌ಮನ್ |
| IV. ಸಮಾಜ ಕಲ್ಯಾಣ ಆಡಳಿತ | 4. ಹೆಚ್.ಬಿ. ಟ್ರೆಕ್ಕರ್ |

**ಸಂಕೇತಗಳು :**

| | I | II | III | IV |
|---|---|---|---|---|
| (A) | 3 | 4 | 1 | 2 |
| (B) | 4 | 2 | 3 | 1 |
| (C) | 1 | 4 | 2 | 3 |
| (D) | 2 | 3 | 4 | 1 |

**6.** CARA ಈ ಸಂಕ್ಷಿಪ್ತಾಕ್ಷರಗಳು ಏನನ್ನು ಸೂಚಿಸುತ್ತವೆ ?
(A) ಸೆಂಟ್ರಲ್ ರಿಸೋರ್ಸ್ ಏಜೆನ್ಸಿ ಆನ್ ಅಡೊಪ್ಷನ್
(B) ಸೆಂಟ್ರಲ್ ರಿಸೋರ್ಸ್ ಏಜೆನ್ಸಿ ಆನ್ ಅಡೋಲೆಸೆಂಟ್ಸ್
(C) ಸೆಂಟ್ರಲ್ ರಿಸೋರ್ಸ್ ಏಜೆನ್ಸಿ ಆನ್ ಅಡ್ವೊಕೇಟ್ಸ್
(D) ಸೆಂಟ್ರಲ್ ರಿಸೋರ್ಸ್ ಏಜೆನ್ಸಿ ಆನ್ ಅಪ್ರೂವರ್ಸ್

# SOCIAL WORK
## Paper – II

**Note :** This paper contains **fifty (50)** objective type questions. **Each** question carries **two (2)** marks. **All** questions are **compulsory**.

**1.** The global definition of Social Work Profession states that "Social Work is a ________ profession".

(A) Justice Based

(B) Service Based

(C) Practice Based

(D) Value Based

**2.** The Poor Law 1601 of UK is referred to as

(A) The Elizabethan Poor Law

(B) Victorian Poor Law

(C) Beweridge Poor Law

(D) The Poor Law Commission

**3.** Match List-I with List-II from the following codes given below :

| | List – I | | List – II |
|---|---|---|---|
| I. | G.K. Gokhale | 1. | Arya Samaj |
| II. | Swamy Vivekananda | 2. | Brahmosamaj |
| III. | Dayananda Saraswathi | 3. | Servants of India Society |
| IV. | Raja Ram Mohan Roy | 4. | Ramakrishna Mission |

**Codes :**

| | I | II | III | IV |
|---|---|---|---|---|
| (A) | 3 | 2 | 1 | 4 |
| (B) | 3 | 4 | 1 | 2 |
| (C) | 2 | 3 | 4 | 1 |
| (D) | 4 | 2 | 3 | 1 |

**4.** Who headed the First Review Committee on Social Work Education in India ?

(A) M. S. Gore

(B) V. Jagannathan

(C) A. R. Wadia

(D) Radhakamal Mukherjee

**5.** Name the authors associated with the following social work methods :

| | List – I | | List – II |
|---|---|---|---|
| I. | Social Case Work | 1. | Murry G. Ross |
| II. | Social Group Work | 2. | D. Paul Chowdhry |
| III. | Community Organisation | 3. | H. H. Perlman |
| IV. | Social Welfare Administration | 4. | H. B. Trecker |

**Codes :**

| | I | II | III | IV |
|---|---|---|---|---|
| (A) | 3 | 4 | 1 | 2 |
| (B) | 4 | 2 | 3 | 1 |
| (C) | 1 | 4 | 2 | 3 |
| (D) | 2 | 3 | 4 | 1 |

**6.** The abbreviation CARA stands for

(A) Central Resource Agency on Adoption

(B) Central Resource Agency on Adolescents

(C) Central Resource Agency on Advocates

(D) Central Resource Agency on Approvers

7. ಸಮಾನತೆಯ ಗುರಿಗಳನ್ನು ಸಾಧಿಸಲು ಅತ್ಯುತ್ತಮ ದಾರಿಯೆಂದರೆ ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಇಲ್ಲವಾಗಿಸುವುದು ಅಥವಾ ಅವುಗಳಲ್ಲಿ ಪ್ರಮುಖ ಬದಲಾವಣೆಗಳನ್ನು ಸಾಧಿಸುವುದು ಎಂದು ವಾದಿಸುವ ವಿಚಾರಧಾರೆಯನ್ನು __________ ಎನ್ನುವರು.
   (A) ತೀವ್ರಗಾಮಿ ಸಮಾಜಕಾರ್ಯ
   (B) ಅಭಿವೃದ್ಧಿ ಕೇಂದ್ರಿತ ಸಮಾಜಕಾರ್ಯ
   (C) ಸಮಗ್ರ ಸಮಾಜಕಾರ್ಯ
   (D) ನಿವಾರಕ ಸಮಾಜಕಾರ್ಯ

8. ಕೆಳಕಾಣಿಸಿದವುಗಳಲ್ಲಿ ಎಂ.ಕೆ. ಗಾಂಧಿಯವರು ಸಂಸ್ಥಾಪಿಸದೆ ಇರುವ ಸಂಸ್ಥೆಯನ್ನು ಗುರುತಿಸಿರಿ.
   (A) ಹರಿಜನ ಸೇವಕ ಸಂಘ
   (B) ಗ್ರಾಮೋದ್ಯೋಗ ಸಂಘ
   (C) ಸರ್ವಸೇವಾ ಸಂಘ
   (D) ವಯೋಜನಾ ಸೇವಾ ಸಂಘ

9. ಪಟ್ಟಿ 1ನ್ನು ಪಟ್ಟಿ 2ರೊಂದಿಗೆ ಹೊಂದಿಸಿರಿ ಹಾಗೂ ಕೆಳಕಾಣಿಸಿದ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ :

| ಪಟ್ಟಿ – 1 | ಪಟ್ಟಿ – 2 |
|---|---|
| I. ಎಕ್ಸೋಗಮಿ | 1. ತನ್ನ ಸಹೋದರನ ಮಕ್ಕಳಿಲ್ಲದ ವಿಧವೆಯನ್ನು ಮದುವೆಯಾಗುವುದು |
| II. ಎಂಡೋಗಮಿ | 2. ರಕ್ತ ಸಂಬಂಧದ ಹೊರಗಿನವರನ್ನು ಮದುವೆಯಾಗುವುದು |
| III. ಸೊರೋರೇಟ್ | 3. ರಕ್ತ ಸಂಬಂಧದ ಒಳಗಿನವರನ್ನು ಮದುವೆಯಾಗುವುದು |
| IV. ಲೆವಿರೇಟ್ | 4. ಮೃತಪಟ್ಟ ಹೆಂಡತಿಯ ಸಹೋದರಿಯನ್ನು ಮದುವೆಯಾಗುವುದು |

**ಸಂಕೇತಗಳು :**

| | I | II | III | IV |
|---|---|---|---|---|
| (A) | 2 | 3 | 4 | 1 |
| (B) | 3 | 4 | 1 | 2 |
| (C) | 2 | 1 | 4 | 3 |
| (D) | 4 | 3 | 2 | 1 |

10. ಈ ಕೆಳಗಿನವುಗಳಲ್ಲಿ ಯಾವುದು ಪರಸ್ಪರ ಸಾಮಾಜಿಕ ಪ್ರಕ್ರಿಯೆ ಅಲ್ಲ?
   (A) ಸಹಕಾರ
   (B) ಸ್ಪರ್ಧೆ
   (C) ಸಂಘರ್ಷ
   (D) ಸಾಂಸ್ಕೃತಿಕ ಹಿಂಬೀಳಿಕೆ

11. ಭಾರತದ ಸಂವಿಧಾನದ ಯಾವ ಪರಿಚ್ಛೇದವು ಸಮಾಜದ ದುರ್ಬಲ ವರ್ಗದ ಜನರಿಗೆ ಸಾಮಾಜಿಕ ಅನ್ಯಾಯದಿಂದ ರಕ್ಷಣೆ ಮತ್ತು ಎಲ್ಲಾ ವಿಧದ ಶೋಷಣೆ ಹಾಗೂ ಆರ್ಥಿಕ ಮತ್ತು ಶೈಕ್ಷಣಿಕ ಹಿತಾಸಕ್ತಿಗಳ ಉತ್ತೇಜನವನ್ನು ಖಾತರಿಗೊಳಿಸುತ್ತದೆ ?
   (A) ಪರಿಚ್ಛೇದ 25
   (B) ಪರಿಚ್ಛೇದ 46
   (C) ಪರಿಚ್ಛೇದ 45
   (D) ಪರಿಚ್ಛೇದ 51

12. ಈ ಕೆಳಗಿನವುಗಳಲ್ಲಿ ಯಾವುದು ಒಂದು ವೃತ್ತಿಯ ಗುಣಲಕ್ಷಣವಲ್ಲ ?
   (A) ವ್ಯವಸ್ಥಿತ ಜ್ಞಾನ ಸಂಪತ್ತು
   (B) ತರಬೇತಿಯ ವ್ಯವಸ್ಥೆ
   (C) ಸಂಘಟನೆ
   (D) ದಾನಧರ್ಮ

13. 1992ರಲ್ಲಿ ಬ್ರೆಜಿಲ್‌ನಲ್ಲಿ ಜರುಗಿದ ಪರಿಸರ ಮತ್ತು ಅಭಿವೃದ್ಧಿಯ ಕುರಿತ ಯುನೈಟೆಡ್ ನೇಷನ್ ಸಮ್ಮೇಳನವನ್ನು ಹೀಗೆಂದೂ ಕರೆಯುವರು.
   (A) ಗ್ಲೋಬಲ್ ಸಮಿಟ್
   (B) ಬ್ರೆಝಿಲ್ ಸಮಿಟ್
   (C) ಅರ್ಥ್ ಸಮಿಟ್
   (D) ಎನ್ವಿರಾನ್‌ಮೆಂಟಲ್ ಸಮಿಟ್

**7.** The ideology that the most effective way to achieve the goals of equality is to eliminate or to make major changes in the existing institutions is known as

(A) Radical Social Work
(B) Developmental Social Work
(C) Integrated Social Work
(D) Curative Social Work

**8.** Find out the organisation which is not founded by M. K. Gandhi

(A) Harijan Sevak Sangh
(B) Gram Udyog Sangh
(C) Sarva Seva Sangh
(D) Vayojana Seva Sangh

**9.** Match List-I with List-II from the codes given below :

| List – I | List – II |
|---|---|
| I. Exogamy | 1. Marrying childless widow of one's brother |
| II. Endogamy | 2. Marrying outside the blood relationship |
| III. Sororate | 3. Marrying within the blood relationship |
| IV. Levirate | 4. Marrying the sister of the deceased wife |

**Codes :**

| | I | II | III | IV |
|---|---|---|---|---|
| (A) | 2 | 3 | 4 | 1 |
| (B) | 3 | 4 | 1 | 2 |
| (C) | 2 | 1 | 4 | 3 |
| (D) | 4 | 3 | 2 | 1 |

**10.** Which of the following is not a process of social interaction ?

(A) Co-operation
(B) Competition
(C) Conflict
(D) Cultural Lag

**11.** Which Article of the Constitution of India states that protection from social injustice and all forms of exploitation and promotion of economic and educational interests of the weaker sections of the society ?

(A) Article 25
(B) Article 46
(C) Article 45
(D) Article 51

**12.** Which of the following is not a characteristic of profession ?

(A) An organised body of knowledge
(B) A system of training
(C) An organisation
(D) A charity

**13.** UN Conference on Environment and Development held in Brazil in 1992 is also known as

(A) Global Summit
(B) Brazil Summit
(C) Earth Summit
(D) Environmental Summit

**14.** ವ್ಯಕ್ತಿಯಲ್ಲಿ ಮೌಲ್ಯಗಳು, ನಂಬಿಕೆಗಳು ಮತ್ತು ಸಂಸ್ಕೃತಿಯನ್ನು ತುಂಬಿಸುವ ಪ್ರಕ್ರಿಯೆಯನ್ನು __________ ಎನ್ನುವರು.

(A) ಪರಸ್ಪರಕ್ರಿಯೆ

(B) ಸಾಮಾಜೀಕರಣ

(C) ಸಂವಹನ

(D) ಸಾಮಾಜಿಕ ಹತೋಟಿ

**15.** ನಿಗದಿಗೊಳ್ಳುವಿಕೆ ಮತ್ತು ಹಿಂಚಲನೆಗಳನ್ನು ಈ ಕೆಳಗಿನ __________ ಸಿದ್ಧಾಂತದಲ್ಲಿ ಬಳಸಲಾಗುತ್ತದೆ.

(A) ಮನೋವಿಶ್ಲೇಷಣೆ

(B) ವರ್ತನೆ ಬದಲಾವಣೆ ಸಿದ್ಧಾಂತ

(C) ಫೆನೋಮಿನೊಲಾಜಿಕಲ್ ಸಿದ್ಧಾಂತ

(D) ಬೆಳವಣಿಗೆ ಆಧಾರಿತ ಸಿದ್ಧಾಂತ

**16.** ರೋಗಿ/ಅರ್ಥಿಯಲ್ಲಿ ಆತಂಕವನ್ನು ಉಂಟುಮಾಡುವ ಭಾವನೆಗಳು/ಮನೋಭಾವನೆಗಳ ವಿರುದ್ಧವಾದ ಭಾವನೆಗಳು/ಮನೋಭಾವನೆಗಳನ್ನು ಹುಟ್ಟುಹಾಕುವ ರಕ್ಷಣಾ ತಂತ್ರ

(A) ಡಿನಾಯಲ್

(B) ರಿಪ್ರೆಷನ್

(C) ಪ್ರೊಜೆಕ್ಷನ್

(D) ರಿಯಾಕ್ಷನ್ ಫಾರ್ಮೇಷನ್

**17.** ಮಾಸ್ಲೋರವರು ಪ್ರತಿಪಾದಿಸಿರುವ ಅವಶ್ಯಕತೆಗಳ ಏಣಿ-ಶ್ರೇಣಿಯಲ್ಲಿ ಇಲ್ಲದಿರುವ ಅವಶ್ಯಕತೆ ಯಾವುದು ?

(A) ಹೈಜೆನಿಕ್ ಅವಶ್ಯಕತೆ

(B) ಭೌತಿಕ ಅವಶ್ಯಕತೆ

(C) ಸಂರಕ್ಷಣಾ ಅವಶ್ಯಕತೆ

(D) ಆತ್ಮಾಭಿಮಾನದ ಅವಶ್ಯಕತೆ

**18.** ''ಸೋಷಿಯಲ್ ಕೇಸ್‌ವರ್ಕ್ : ಎ ಪ್ರಾಬ್ಲಮ್ ಸಾಲ್ವಿಂಗ್ ಪ್ರೋಸೆಸ್'' ಈ ಶೀರ್ಷಿಕೆ ಇರುವ ಪುಸ್ತಕವನ್ನು ಬರೆದವರು

(A) ಮೇರಿ ರಿಚ್‌ಮಂಡ್

(B) ಹೆಲೆನ್ ಹ್ಯಾರಿಸ್ ಪರ್ಲ್‌ಮನ್

(C) ಗಾರ್ಡನ್ ಹ್ಯಾಮಿಲ್ಟನ್

(D) ಗ್ರೇಸ್ ಮ್ಯಾಥೀವ್

**19.** ಧರ್ಮದ ಕಾರ್ಯವಲ್ಲದ ಆಯ್ಕೆಯನ್ನು ಪತ್ತೆ ಹಚ್ಚಿರಿ.

(A) ಧರ್ಮವು ವಿಭಜನೆಯನ್ನು ಉಂಟುಮಾಡುತ್ತದೆ

(B) ಧರ್ಮವು ಜೀವನದ ಮೌಲ್ಯವನ್ನು ಉಳಿಸುತ್ತದೆ

(C) ಧರ್ಮವು ಕಲ್ಯಾಣವನ್ನು ಉತ್ತೇಜಿಸುತ್ತದೆ

(D) ಧರ್ಮವು ಉಪಶಮನ ಮತ್ತು ಮನರಂಜನೆಯನ್ನು ನೀಡುತ್ತದೆ

**20.** ಈ ಕೆಳಗಿನವುಗಳಲ್ಲಿ ಯಾವುದು ಸಮಾಜಕಾರ್ಯದ ಪ್ರಾಥಮಿಕ ವಿಧಾನವಲ್ಲ ಎಂಬುದನ್ನು ಪತ್ತೆ ಹಚ್ಚಿರಿ.

(A) ವ್ಯಕ್ತಿಗತ ಸಮಾಜಕಾರ್ಯ

(B) ಸಮುದಾಯ ಸಂಘಟನೆ

(C) ಸಮಾಜಕಾರ್ಯ ಸಂಶೋಧನೆ

(D) ವೃಂದಗತ ಸಮಾಜಕಾರ್ಯ

**21.** ಇನ್ನೊಬ್ಬ ವ್ಯಕ್ತಿಯ ಭಾವನಾತ್ಮಕ ಸ್ಥಿತಿಯನ್ನು ಗ್ರಹಿಸುವ, ಅರ್ಥೈಸುವ, ಅನುಭವಿಸುವ ಮತ್ತು ಪ್ರತಿಕ್ರಿಯಿಸುವ ಕಾರ್ಯವನ್ನು __________ ಎನ್ನಲಾಗುತ್ತದೆ.

(A) ಅನುಕಂಪ

(B) ಅನುಭೂತಿ

(C) ಗ್ರಹಿಸುವಿಕೆ

(D) ಪ್ರತಿಬಿಂಬಿಸುವಿಕೆ

**14.** The process by which values, beliefs and culture are instilled in the individual is

(A) Interaction

(B) Socialisation

(C) Communication

(D) Social control

**15.** Fixation and regression are used in one of the following theories

(A) Psychoanalysis

(B) Behaviour modification theory

(C) Phenomenological theory

(D) Growth oriented theory

**16.** The defense mechanism that makes the patient/client to develop feelings/ attitudes opposite to the anxiety provoking feelings/attitudes

(A) Denial

(B) Repression

(C) Projection

(D) Reaction formation

**17.** Which one of the following is not the need in the hierarchy of needs as propounded by Maslow ?

(A) Hygienic needs

(B) Physiological needs

(C) Safety needs

(D) Esteem needs

**18.** The book titled "Social Case Work : A Problem Solving Process" is authored by

(A) Mary Richmond

(B) Helen Harris Perlman

(C) Gordon Hamilton

(D) Grace Mathew

**19.** Identify the option that is not a religion.

(A) Religion promotes division

(B) Religion conserves the value of life

(C) Religion promotes welfare

(D) Religion provides relief and recreation

**20.** Find out which is not a primary method of Social Work.

(A) Social Case Work

(B) Community Organisation

(C) Social Work Research

(D) Social Group Work

**21.** The act of perceiving, understanding, experiencing and responding to the emotional state of another person is known as

(A) Sympathy

(B) Empathy

(C) Perception

(D) Reflection

**22.** ಸಮುದಾಯ ಸಂಘಟನೆಯ ಜಾಗೃತೀಕರಣ ಮಾದರಿಯು __________ ರಿಗೆ ಸಂಬಂಧಿಸಿದೆ.

(A) ಇ. ಬಿ. ಹರ್ಲಾಕ್

(B) ಹೆಚ್. ಬಿ. ಟ್ರೆಕ್ಕರ್

(C) ಹೆಚ್. ಹೆಚ್. ಪರ್ಲ್‌ಮನ್

(D) ಫೌಲೋ ಫ್ರೇರೆ

**23.** ಇವುಗಳಲ್ಲಿ ಯಾವುದು ವೃಂದಕಾರ್ಯ ಪ್ರಕ್ರಿಯೆಯಲ್ಲಿನ ಹಂತವಲ್ಲ ?

(A) ರಚಿಸುವುದು

(B) ಸಂಘರ್ಷಕ್ಕೊಳಗಾಗುವುದು

(C) ನೆರವೇರಿಸುವುದು

(D) ಪ್ರತಿರೂಪಣಗೊಳಿಸುವುದು

**24.** ಯಾರು ಒಳವೃಂದ ಮತ್ತು ಹೊರವೃಂದಗಳ ನಡುವಿನ ವ್ಯತ್ಯಯವನ್ನು ಗುರುತಿಸಿದವರು ?

(A) ಡಬ್ಲ್ಯೂ. ಜಿ. ಸಮ್ನರ್

(B) ಮೇರಿ ರಿಚ್ಮಂಡ್

(C) ಟೋನಿಸ್

(D) ಸಿ. ಹೆಚ್. ಕೂಲಿ

**25.** ಜಿಲ್ಲಾ ಪುನರ್‌ವಸತಿ ಕೇಂದ್ರದ ಫಲಾನುಭವಿಗಳನ್ನು ಹೆಸರಿಸಿರಿ.

(A) ವಿಕಲಚೇತನರು

(B) ಸಂಕಷ್ಟದಲ್ಲಿರುವ ಕುಟುಂಬಗಳು

(C) ತೊರೆಯಲ್ಪಟ್ಟ ವ್ಯಕ್ತಿಗಳು

(D) ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳು

**26.** ಪಟ್ಟಿ – 1ನ್ನು ಪಟ್ಟಿ –2ರೊಂದಿಗೆ ಹೊಂದಿಸಿರಿ ಹಾಗೂ ಕೆಳಕಾಣಿಸಿದ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ :

| ಪಟ್ಟಿ - 1 | ಪಟ್ಟಿ - 2 |
|---|---|
| I. ಅಂತರರಾಷ್ಟ್ರೀಯ ಮಹಿಳಾ ದಿನ | 1. ಡಿಸೆಂಬರ್ 1 |
| II. ಜಾಗತಿಕ ಆಹಾರ ದಿನ | 2. ಡಿಸೆಂಬರ್ 10 |
| III. ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನ | 3. ಅಕ್ಟೋಬರ್ 10 |
| IV. ಜಾಗತಿಕ ಏಡ್ಸ್ ದಿನ | 4. ಮಾರ್ಚ್ 8 |

**ಸಂಕೇತಗಳು :**

| | I | II | III | IV |
|---|---|---|---|---|
| (A) | 4 | 3 | 2 | 1 |
| (B) | 3 | 2 | 1 | 4 |
| (C) | 2 | 4 | 3 | 1 |
| (D) | 4 | 2 | 3 | 1 |

**27.** ಮೌಖಿಕ ಸಂವಹನವು ಯಾವುದಕ್ಕೆ ಸಂಬಂಧಿಸಿದೆ ?

(A) ಸನ್ನೆ ಮತ್ತು ದೇಹದ ಚಲನೆ ಮೂಲಕ ಮಾಡುವ ಸಂವಹನ

(B) ಪದಗಳು ಮತ್ತು ಮಾತಿನ ಮೂಲಕ ಮಾಡುವ ಸಂವಹನ

(C) ಧ್ವನಿ ಮತ್ತು ಷರತ್ತುಗಳ ಮೂಲಕ ಮಾಡುವ ಸಂವಹನ

(D) ಏಕ ಉಚ್ಚಾರಾಂಶದ ಮೂಲಕ ಸಂವಹನ

**22.** Conscientization model of Community Organisation is associated with

(A) E. B. Hurlock

(B) H. B. Trecker

(C) H. H. Perlman

(D) Paulo Friere

**23.** Which one of the following is not a stage in the group process/work ?

(A) Forming

(B) Storming

(C) Performing

(D) Replicating

**24.** Who differentiated between in-group and out-group ?

(A) W. G. Sumner

(B) Mary Richmond

(C) Tonnies

(D) C. H. Cooley

**25.** Name the beneficiaries of District Rehabilitation Centre.

(A) Persons with disabilities

(B) Families in distress

(C) Deserted persons

(D) Persons living under below poverty-line

**26.** Match List-I with List-II and choose the correct answer from the codes given below :

| **List – I** | **List – II** |
|---|---|
| I. International Women's Day | 1. $1^{st}$ December |
| II. World Food Day | 2. $10^{th}$ December |
| III. International Human Rights Day | 3. $10^{th}$ October |
| IV. World AIDS Day | 4. $8^{th}$ March |

**Codes :**

| | **I** | **II** | **III** | **IV** |
|---|---|---|---|---|
| (A) | 4 | 3 | 2 | 1 |
| (B) | 3 | 2 | 1 | 4 |
| (C) | 2 | 4 | 3 | 1 |
| (D) | 4 | 2 | 3 | 1 |

**27.** Verbal Communication refers to

(A) Communication through gestures, body movements

(B) Communication through words and speech

(C) Communication through voices and terms

(D) Communication through monosyllables

**28.** ಒತ್ತಡಕ್ಕೆ ಕಾರಣಭೂತ ಅಂಶಗಳಿಗೆ (stressors) ಶಾರೀರಿಕ ಪ್ರತಿಕ್ರಿಯೆಯಲ್ಲಿ ಆಗುವ ಬದಲಾವಣೆಯ ಹಂತಗಳನ್ನು ಸರಿಯಾದ ಕ್ರಮದಲ್ಲಿ ಗುರುತಿಸಿರಿ.

(A) ಪ್ರತಿರೋಧದ ಹಂತ, ಎಚ್ಚರಿಕೆಯ ಹಂತ, ದಣಿವಿನ ಹಂತ

(B) ಎಚ್ಚರಿಕೆಯ ಹಂತ, ದಣಿವಿನ ಹಂತ, ಪ್ರತಿರೋಧದ ಹಂತ

(C) ಎಚ್ಚರಿಕೆಯ ಹಂತ, ಪ್ರತಿರೋಧದ ಹಂತ, ದಣಿವಿನ ಹಂತ

(D) ಪ್ರತಿರೋಧದ ಹಂತ, ದಣಿವಿನ ಹಂತ, ಎಚ್ಚರಿಕೆಯ ಹಂತ

**29.** **ಪ್ರತಿಪಾದನೆ (A)** : ಸಮಾಜಕಾರ್ಯದ ಆಚರಣೆಯನ್ನು ಕಲಿಯುವಲ್ಲಿ ದಾಖಲೀಕರಣವು ಅತ್ಯಂತ ಮಹತ್ವದ ವಿಧಾನವಾಗಿದೆ.

**ಸಮರ್ಥನೆ (R)** : ಪ್ರಾಥಮಿಕ ವಿಧಾನಗಳ ಆಚರಣೆಯಲ್ಲಿ ದಾಖಲೀಕರಣವೂ ಹೇರಳವಾದ ಮಾಹಿತಿಯನ್ನು ಒದಗಿಸುತ್ತದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿ ಹಾಗೂ (R) (A)ಗೆ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿ ಆದರೆ, (R) (A)ಗೆ ಸರಿಯಾದ ವಿವರಣೆಯಲ್ಲ

(C) (A) ಸರಿಯಾಗಿದೆ ಆದರೆ (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಆದರೆ (R) ಸರಿಯಾಗಿದೆ

**30.** ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಅನುಕ್ರಮಣಿಕೆಯನ್ನು ಹೊಂದಿದೆ ?

(A) ವೃದ್ಧರು-ವೃದ್ಧರು, ವಯಸ್ಕ-ವೃದ್ಧರು, ಅತಿ-ವೃದ್ಧರು

(B) ವಯಸ್ಕ-ವೃದ್ಧರು, ವೃದ್ಧರು-ವೃದ್ಧರು, ಅತಿ-ವೃದ್ಧರು

(C) ಅತಿ-ವೃದ್ಧರು, ವೃದ್ಧರು-ವೃದ್ಧರು, ವಯಸ್ಕ-ವೃದ್ಧರು

(D) ವಯಸ್ಕ-ವೃದ್ಧರು, ಅತಿ-ವೃದ್ಧರು, ವೃದ್ಧರು-ವೃದ್ಧರು

**31.** ಈ ಕೆಳಗಿನ ಚಳುವಳಿಗಳನ್ನು ಅವುಗಳಿಗೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಹೊಂದಿಸಿರಿ.

| **ಪಟ್ಟಿ - 1** | **ಪಟ್ಟಿ - 2** |
|---|---|
| I. ಭೂದಾನ ಚಳುವಳಿ | 1. ಮೇಧಾ ಪಾಟ್‌ಕರ್ |
| II. ಚಿಪ್ಕೋ ಚಳುವಳಿ | 2. ಎಂ.ಕೆ. ಗಾಂಧಿ |
| III. ಸರ್ವೋದಯ ಚಳುವಳಿ | 3. ವಿನೋಭಾ ಭಾವೆ |
| IV. ನರ್ಮದಾ ಬಚಾವೋ ಆಂದೋಲನ | 4. ಸುಂದರ್‌ಲಾಲ್ ಬಹುಗುಣ |

**ಸಂಕೇತಗಳು :**

| | I | II | III | IV |
|---|---|---|---|---|
| (A) | 4 | 1 | 2 | 3 |
| (B) | 3 | 4 | 2 | 1 |
| (C) | 2 | 3 | 1 | 4 |
| (D) | 1 | 3 | 4 | 2 |

**32.** ಜಾಕ್ ರಾಥ್‌ಮನ್‌ರವರ ಸಮುದಾಯ ಸಂಘಟನೆ ಮಾದರಿಗಳಲ್ಲಿ ಇಲ್ಲದ ಆಯ್ಕೆಯನ್ನು ಗುರುತಿಸಿರಿ.

(A) ಸಮಾಜ ಯೋಜನಾ ಮಾದರಿ

(B) ಸ್ಥಳೀಯ ಅಭಿವೃದ್ಧಿ ಮಾದರಿ

(C) ಸಾಮಾಜಿಕ ಪ್ರಚೋದನೆ ಮಾದರಿ

(D) ಸಮಸ್ಯೆ ಬಗೆಹರಿಸುವ ಮಾದರಿ

**33.** ಈ ಕೆಳಗಿನ ಸಾಮಾಜಿಕ ಪ್ರಚೋದನೆಯ ಪ್ರಕ್ರಿಯೆಯನ್ನು ಅನುಕ್ರಮಣೀಯವಾಗಿ ಹೊಂದಿಸಿರಿ.

I. ಅವಶ್ಯಕತೆ ಅಥವಾ ಪರಿಸ್ಥಿತಿ

II. ಸಂಪನ್ಮೂಲಗಳು

III. ದಲ್ಲಾಳಿ

IV. ಆಧಾರ/ನೆಲೆ

**ಸಂಕೇತಗಳು :**

| | | | | |
|---|---|---|---|---|
| (A) | IV | II | I | III |
| (B) | I | IV | III | II |
| (C) | III | II | I | IV |
| (D) | IV | III | II | I |

**28.** Identify the stages in physiological response to stressors in the correct sequential order.

(A) Resistance stage, Alarm stage, Exhaustion stage

(B) Alarm stage, Exhaustion stage, Resistance stage

(C) Alarm stage, Resistance stage, Exhaustion stage

(D) Resistance stage, Exhaustion stage, Alarm stage

**29.** **Assertion (A)** : Recording is an extremely important method to learn social work practice.

**Reason (R)** : Recording provides a rich source of information especially for the practice of primary methods.

**Codes :**

(A) Both (A) and (R) are correct and (R) is the correct explanation for (A)

(B) Both (A) and (R) are correct, but (R) is not the correct explanation for (A)

(C) (A) is correct and (R) is not correct

(D) (A) is not correct and (R) is correct

**30.** Which of the following is correct in terms of sequential order ?

(A) Old-Old, Young-Old, Very-Old

(B) Young-Old, Old-Old, Very-Old

(C) Very-Old, Old-Old, Young-Old

(D) Young-Old, Very-Old, Old-Old

**31.** Arrange the following movements and the personalities associated with the movements.

| List – I | List – II |
|---|---|
| I. Bhoodan Movement | 1. Medha Patkar |
| II. Chipko Movement | 2. M. K. Gandhi |
| III. Sarvodaya Movement | 3. Vinobha Bhave |
| IV. Narmada Bachavo Andholan | 4. Sundarlal Bahuguna |

**Codes :**

| | I | II | III | IV |
|---|---|---|---|---|
| (A) | 4 | 1 | 2 | 3 |
| (B) | 3 | 4 | 2 | 1 |
| (C) | 2 | 3 | 1 | 4 |
| (D) | 1 | 3 | 4 | 2 |

**32.** Find out the option which is not a Community Organization Model introduced by Jack Rathman.

(A) Social Planning Model

(B) Locality Development Model

(C) Social Action Model

(D) Problem Solving Model

**33.** Arrange the following Social Action Process in a sequential order.

I. Need or Condition

II. Resources

III. Agent

IV. Locus/Base

**Codes :**

| | | | | |
|---|---|---|---|---|
| (A) | IV | II | I | III |
| (B) | I | IV | III | II |
| (C) | III | II | I | IV |
| (D) | IV | III | II | I |

**34.** ಯಾವುದೋ ಪ್ರಭಾವ ಬಳಸುವಿಕೆ ಎಂದರೆ
(A) ಸಹಕಾರವನ್ನು ಗಳಿಸುವುದು
(B) ವಿಶ್ವಾಸವನ್ನು ಗಳಿಸುವುದು
(C) ಒತ್ತಡವನ್ನು ಗಳಿಸುವುದು
(D) ಗುರಿಯನ್ನು ಗಳಿಸುವುದು

**35.** ಭಾವನೆಗಳ ಪ್ರತಿವರ್ಗಾವಣೆಯು __________ ಗೆ ಸಂಬಂಧಿಸಿದೆ.
(A) ಆಪ್ತ ಸಮಾಲೋಚನೆಯನ್ನು ಪಡೆಯುವ ವ್ಯಕ್ತಿಯಿಂದ ಆಪ್ತ ಸಮಾಲೋಚಕನಿಗೆ ಭಾವನೆಗಳು ವರ್ಗಾಯಿಸಲ್ಪಡುವುದು
(B) ಆಪ್ತ ಸಮಾಲೋಚಕನಿಂದ ಆಪ್ತ ಸಮಾಲೋಚನೆಯನ್ನು ಪಡೆಯುವ ವ್ಯಕ್ತಿಗೆ ಭಾವನೆಗಳು ವರ್ಗಾಯಿಸಲ್ಪಡುವುದು
(C) ಆಪ್ತ ಸಮಾಲೋಚನೆಯನ್ನು ಪಡೆಯುವ ವ್ಯಕ್ತಿಯಿಂದ ಭಾವನೆಗಳು ನಿಯೋಗಕ್ಕೆ ವರ್ಗಾಯಿಸಲ್ಪಡುವುದು
(D) ಆಪ್ತ ಸಮಾಲೋಚಕನಿಂದ ಭಾವನೆಗಳು ನಿಯೋಗಕ್ಕೆ ವರ್ಗಾಯಿಸಲ್ಪಡುವುದು

**36.** ಚಾರಿಟಿ ಆರ್ಗನೈಸೇಷನ್ ಸೊಸೈಟಿಗಳನ್ನು _______ ಗಾಗಿ ಸ್ಥಾಪಿಸಲಾಯಿತು.
(A) ಜನರಲ್ಲಿನ ಅನಕ್ಷರತೆಯನ್ನು ಹೋಗಲಾಡಿಸಲು
(B) ಸಾಮಾಜಿಕವಾಗಿ ಕ್ರಿಯಾತ್ಮಕವಾದ ಕಾರ್ಯದಲ್ಲಿ ತೊಡಗಿಸಲು ಜನರಿಗೆ ಸಹಾಯ ಮಾಡಲು
(C) ಧಾರ್ಮಿಕ ಚಟುವಟಿಕೆಗಳಿಗಾಗಿ ಹಣವನ್ನು ಸಂಗ್ರಹಿಸಲು
(D) ಅರ್ಹ ಬಡವರಿಗೆ ಕಷ್ಟದ ಸಮಯದಲ್ಲಿ ಅವರ ಅವಶ್ಯಕತೆಗಳನ್ನು ಪೂರೈಸಲು ಸಹಾಯ ಮಾಡಲು

**37.** ತಳಮಟ್ಟದಿಂದ ಮೇಲಕ್ಕೆ ಹೋಗುವ ಪ್ರಕ್ರಿಯೆ __________ ಗೆ ಸಂಬಂಧಿಸಿದೆ.
(A) ಸಮಗ್ರ ಹಂತದ ಯೋಜನೆ
(B) ಸೂಕ್ಷ್ಮ ಹಂತದ ಯೋಜನೆ
(C) ಸಮಗ್ರ ಹಣಕಾಸು
(D) ಸೂಕ್ಷ್ಮ ಹಣಕಾಸು

**38.** ವೃಂದದ ಅಭಿವೃದ್ಧಿಯ ಚಿಹ್ನೆಯನ್ನು ಗುರುತಿಸಿರಿ.
(A) ಸದಸ್ಯರ ಸೀಮಿತವಾದ ಭಾಗವಹಿಸುವಿಕೆ
(B) ಸಾಧಾರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಪೇಕ್ಷೆ
(C) ಸದಸ್ಯರ ತಡವಿಲ್ಲದ ಮತ್ತು ನಿರಂತರವಾದ ಹಾಜರಾತಿ
(D) ವೃಂದ ಸದಸ್ಯರ ನಡುವೆ ಇರುವ ಔಪಚಾರಿಕ ಸಂಬಂಧಗಳ ಇರುವಿಕೆ

**39.** ಕೆಳಕಾಣಿಸಿದವುಗಳಲ್ಲಿ ಯಾವುದು ಬಳಸಬಹುದಾದ ಪ್ರಾಕಲ್ಪನೆಯ ಗುಣಲಕ್ಷಣವಲ್ಲ ?
(A) ಪ್ರಾಕಲ್ಪನೆಯು ಪರಿಕಲ್ಪನಾತ್ಮಕವಾಗಿ ಸ್ಪಷ್ಟವಾಗಿರಬೇಕು
(B) ಪ್ರಾಕಲ್ಪನೆಗೆ ಪ್ರಾಯೋಗಿಕ ಪರಾಮರ್ಶನವನ್ನು ಹೊಂದಿರಬೇಕು
(C) ಪ್ರಾಕಲ್ಪನೆಯು ಇತರ ಸಂಶೋಧಕರಿಂದ ಪ್ರಸ್ತಾಪಿಸಲ್ಪಟ್ಟು ಮತ್ತು ಪರೀಕ್ಷೆಗೆ ಒಳಗೊಂಡಿರಬೇಕು
(D) ಪ್ರಾಕಲ್ಪನೆಯು ನಿರ್ದಿಷ್ಟವಾಗಿರಬೇಕು

**40.** ಎಲ್ಲಾ ವಿಜ್ಞಾನಿಗಳಿಗೆ ಅವರ ಸಂಶೋಧನೆಯಲ್ಲಿ ಎರಡು ವಿಧದ ಉಪಕರಣಗಳ ಅವಶ್ಯಕತೆ ಇರುತ್ತದೆ. ದತ್ತಾಂಶ ಸಂಗ್ರಹಕ್ಕಾಗಿ ಬೇಕಾಗುವ ಉಪಕರಣಗಳು ಹಾಗೂ
(A) ಸಂಶೋಧನಾ ವರದಿಯನ್ನು ಸಲ್ಲಿಸುವುದು
(B) ಕಂಡುಕೊಂಡ ಪರಿಣಾಮಗಳನ್ನು ವ್ಯಾಖ್ಯಾಯಿಸುವುದಕ್ಕೆ ಬೇಕಾಗುವ ಮಾರ್ಗಗಳು
(C) ನಮೂನೆಯ ಆಯ್ಕೆ
(D) ಗಣಕಯಂತ್ರದ ಬಳಕೆ

**41.** ಸಂಶೋಧನೆಯಲ್ಲಿ ಭಾಗವಹಿಸುವವರಿಂದ ಸಂಶೋಧನೆಯ ಕುರಿತ ಮಾಹಿತಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದನ್ನು __________ ಎನ್ನುವರು.
(A) ಮಾಹಿತಿ ನೀಡಿ ಪಡೆದಿರುವ ಒಪ್ಪಿಗೆ
(B) ತಿಳುವಳಿಕೆ ನೀಡದಿರುವುದು
(C) ಸುಳ್ಳು ಹೇಳುವುದು
(D) ಗೌಪ್ಯತೆಯಲ್ಲಿಡುವುದು

**42.** ಕೈಲಾಶ್ ಸತ್ಯಾರ್ಥಿಯವರನ್ನು ಅವರು __________ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ನೋಬೆಲ್ ಶಾಂತಿ ಪಾರಿತೋಷಕಕ್ಕೆ ಪರಿಗಣಿಸಲಾಗಿದೆ.
(A) ಬಾಲಕಾರ್ಮಿಕತೆ
(B) ಮಹಿಳಾ ಕಲ್ಯಾಣ
(C) ಯುವಕರ ಕಲ್ಯಾಣ
(D) ವೃದ್ಧರ ಕಲ್ಯಾಣ

**34.** Lobbying does not mean
(A) Winning Support
(B) Winning Confidence
(C) Winning Pressure
(D) Winning Goal

**35.** Counter transference relates to
(A) Transfer of feelings from counsellee to counsellor
(B) Transfer of feelings from counsellor to counsellee
(C) Transfer of feelings from counsellee to Agency
(D) Transfer of feelings from counsellor to Agency

**36.** Charity Organization Societies were formed
(A) To eradicate illiteracy among people
(B) To help people in taking up socially constructive activities
(C) To raise money for religious activities
(D) To help the deserving poor to meet their needs in times of difficulty

**37.** Bottom-up concept is related to
(A) Macro Level Planning
(B) Micro Level Planning
(C) Macro Finance
(D) Micro Finance

**38.** Identify the sign of group development.
(A) Limited participation of members
(B) Desire to have simple programmes
(C) Prompt and constant attendance of members
(D) Existence of formal relations among group members

**39.** Identify which one is not the characteristic of usable hypothesis.
(A) The hypothesis must be conceptually clear
(B) The hypothesis should have empirical reference
(C) The hypothesis should have been proposed and tested by other researcher
(D) The hypothesis must be specific

**40.** All scientists require two types of tools in their research : Instruments for data collection and
(A) Presentation of research report
(B) Means of interpreting the findings
(C) Selection of sample
(D) Use of computers

**41.** _______ is the temporary withholding of information about a study from research participants.
(A) Informed consent
(B) Debriefing
(C) Deception
(D) Confidentiality

**42.** Kailash Satyarthi was considered for the award of Noble Peace Prize for his contribution in the field of
(A) Child Labour
(B) Women Welfare
(C) Youth Welfare
(D) Welfare of Elderly

**43.** POSDCORB ಈ ಸಂಕ್ಷಿಪ್ತಾಕ್ಷರವನ್ನು ರಚಿಸಿದವರು

(A) ಮೂನಿ

(B) ಎಲ್.ಡಿ. ವೈಟ್

(C) ಎಫ್.ಎಂ. ಮಾರ್ಕ್ಸ್

(D) ಲೂಥರ್ ಗಲಿಕ್

**44.** ಸಮಾನವಾದ ಸಮಸ್ಯೆಗಳಿರುವ ಸದಸ್ಯರು ಪರಸ್ಪರರಿಗೆ ಸಹಾಯ ಮಾಡುವ ವೃಂದವನ್ನು ___________ ಎನ್ನುವರು.

(A) ಸಣ್ಣವೃಂದ

(B) ಸಂಘಟಿತ ವೃಂದ

(C) ಸ್ವಸಹಾಯ ಸಂಘ

(D) ಏಕರೂಪದ ವೃಂದ

**45.** ಕೆಳಗಿನ ಕಾಯಿದೆಗಳನ್ನು ಅವುಗಳು ಅನುಷ್ಠಾನಗೊಂಡ ವರ್ಷದ ಅನುಕ್ರಮಣಿಕೆಯಲ್ಲಿ ಹೊಂದಿಸಿರಿ :

| | **ಪಟ್ಟಿ - 1** | | **ಪಟ್ಟಿ - 2** |
|---|---|---|---|
| I. | ಹಿಂದೂ ವಿವಾಹ ಕಾಯ್ದೆ | 1. | 2013 |
| II. | ಕುಟುಂಬ ನ್ಯಾಯಾಲಯ ಕಾಯ್ದೆ | 2. | 2005 |
| III. | ಕೌಟುಂಬಿಕ ದೌರ್ಜನ್ಯ ಕಾಯ್ದೆ | 3. | 1955 |
| IV. | ನಿರ್ಭಯಾ ಕಾಯ್ದೆ | 4. | 1984 |

**ಸಂಕೇತಗಳು :**

| | I | II | III | IV |
|---|---|---|---|---|
| (A) | 2 | 4 | 1 | 3 |
| (B) | 3 | 1 | 4 | 2 |
| (C) | 3 | 4 | 2 | 1 |
| (D) | 4 | 1 | 3 | 2 |

**46.** ಸಮುದಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಿದ ವರ್ಷ

(A) 1952

(B) 1953

(C) 1954

(D) 1955

**47.** ಈ ಕೆಳಗಿನವುಗಳಲ್ಲಿ ಒಂದು ಆಯ್ಕೆಯು ಸಮಾಜ ಕಲ್ಯಾಣ ಆಡಳಿತದ ಕಾರ್ಯಾತ್ಮಕ ಭಾಗ ಅಥವಾ ಕಾರ್ಯ ಅಲ್ಲ

(A) ಯೋಜನೆ

(B) ನಿರ್ದೇಶನ

(C) ಸಮನ್ವಯತೆ

(D) ಅಧಿಕಾರದ ಹಂಚಿಕೆ

**48.** ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ ಎಂಬುದನ್ನು ಗುರುತಿಸಿರಿ.

(A) ಪ್ರಜಾಪ್ರಭುತ್ವದಲ್ಲಿ ಸಾಮಾಜಿಕ ಶಾಸನವು ಒಂದು ಜೀವಂತ ಶಕ್ತಿಯಾಗಿದೆ

(B) ಸಾಮಾಜಿಕ ಶಾಸನವು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಉಪಕರಣವಾಗಿದೆ

(C) ನಿನ್ನೆಯ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಇಂದು ಶಾಸನಗಳು ರಚಿಸಲ್ಪಡುತ್ತವೆ

(D) ಸಾಮಾಜಿಕ ಶಾಸನಗಳಿಗೆ ಸಂಬಂಧಪಟ್ಟಂತೆ ಕಾನೂನು ಮತ್ತು ಸಮಾಜಗಳು ಸ್ವತಂತ್ರವಲ್ಲ

**49.** NREP ಈ ಸಂಕ್ಷಿಪ್ತಾಕ್ಷರವು __________ ಅನ್ನು ಸೂಚಿಸುತ್ತದೆ.

(A) ನ್ಯಾಷನಲ್ ರೂರಲ್ ಎಂಪವರ್‌ಮೆಂಟ್ ಪ್ರೋಗ್ರಾಮ್

(B) ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್

(C) ನ್ಯಾಷನಲ್ ರೂರಲ್ ಎಲೆಕ್ಟ್ರಿಸಿಟಿ ಪ್ರೋಗ್ರಾಮ್

(D) ನ್ಯಾಷನಲ್ ರಿಸೋರ್ಸ್ ಆ್ಯಂಡ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್

**50.** ಸೆನ್ ಸಮಿತಿ (1958) _____ ಗೆ ಸಂಬಂಧಪಟ್ಟದ್ದಾಗಿದೆ.

(A) ನಗರ ಬಡತನ

(B) ನಗರ ಕೊಳಚೆ ಪ್ರದೇಶಗಳು

(C) ನಗರ ಗೃಹಗಳು

(D) ನಗರ ನೈರ್ಮಲ್ಯ

**43.** The abbreviation 'POSDCORB' is coined by

(A) Mooney

(B) L. D. White

(C) F. M. Marx

(D) Luther Gullick

**44.** _________ is a group in which members have common problems/issues and help each other.

(A) Small group

(B) Cohesive group

(C) Self-help group

(D) Homogenous group

**45.** Arrange the following acts according to the year of introduction :

| | List – I | List – II |
|---|---|---|
| I. | Hindu Marriage Act | 1. 2013 |
| II. | Family Courts Act | 2. 2005 |
| III. | Domestic Violence Act | 3. 1955 |
| IV. | Nirbhaya Act | 4. 1984 |

**Codes :**

| | I | II | III | IV |
|---|---|---|---|---|
| (A) | 2 | 4 | 1 | 3 |
| (B) | 3 | 1 | 4 | 2 |
| (C) | 3 | 4 | 2 | 1 |
| (D) | 4 | 1 | 3 | 2 |

**46.** Community Development Programme was launched in the year

(A) 1952

(B) 1953

(C) 1954

(D) 1955

**47.** One of the following is not a functional aspect or task of social welfare administration

(A) Planning

(B) Direction

(C) Coordination

(D) Sharing of power

**48.** Identify the incorrect one.

(A) Social Legislation in a Democracy is a living force

(B) Social Legislation is an instrument of social and economic change

(C) Legislation of today is to meet the social needs of yesterday

(D) As far as Social Legislation is concerned law and society are not independent

**49.** The abbreviation NREP stands for

(A) National Rural Empowerment Programme

(B) National Rural Employment Programme

(C) National Rural Electricity Programme

(D) National Resource and Employment Programme

**50.** The Sen Committee (1958) is associated with

(A) Urban Poverty

(B) Urban Slums

(C) Urban Housing

(D) Urban Sanitation

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work